# ಶ್ರೀರಾಮಕೃಷ್ಣ ವಚನವೇದದಿಂದ



## ಶರಣಾಗತಿ

ಭಗವಂತನೊಬ್ಬನೇ ಕರ್ತ, ನಾವೆಲ್ಲರೂ ಅತನ ಯಂತ್ರಗಳು ಮಾತ್ರ. ಆದ್ದರಿಂದ ಜ್ಞಾನಿಗಳೂ ಅಹಂಕಾರ ಪಡುವಹಾಗಿಲ್ಲ. ಶಿವ ಮಹಿಮ್ನಸ್ತೋತ್ರವನ್ನು ಯಾರು ಬರೆದರೋ ಆತನಿಗೆ ಸ್ವಲ್ಪ ಅಹಂಕಾರ ವುಂಟಾಗಿತ್ತು. ಆದರೆ ಯಾವಾಗ ಶಿವನ ವಾಹನ ನಂದಿ ತನ್ನ ಬಾಯನ್ನು ತೆರೆದು, ತನ್ನ ಹಲ್ಲನ್ನು ತೋರಿಸಿತೊ, ಆಗ ಆತನ ಅಹಂಕಾರವೆಲ್ಲಾ ನುಚ್ಚುನೂರಾಗಿ ಹೋಯಿತು. ಅದರ ಪ್ರತಿಯೊಂದು ಹಲ್ಲೂ ಒಂದೊಂದು ಮಂತ್ರವಾಗಿ ಕಂಡುಬಂದಿತು. ಇದರ ಇಂಗಿತವೇನು ಎಂಬುದು ನಿನಗೆ ಅರ್ಥವಾಯಿತೇನು? ಈ ಮಂತ್ರಗಳೆಲ್ಲ ಅನಾದಿ ಕಾಲದಿಂದಲೂ ಇದ್ದುಕೊಂಡು ಬಂದಿದ್ದವು. ಗ್ರಂಥಕರ್ತ ಅದನ್ನು ಕೇವಲ ಪ್ರಕಾಶಕ್ಕೆ ತಂದ.

ಸಂಸಾರಿಗಳು ಸುಖ ಬೇಕೆಂದು ಈ ಜಗತ್ತಿನ ಮೂಲೆ ಮೂಲೆಗಳನ್ನೆಲ್ಲಾ ಹುಡುಕಿ ನೋಡಿಬಿಡುತ್ತಾರೆ. ಅದು ಅವರಿಗೆ ಎಲ್ಲಿಯೂ ದೊರೆಯದು; ಬರಿದೇ ದಣಿದು ಸುಸ್ತಾಗುತ್ತಾರೆ. ಯಾವಾಗ ಅವರು ತಮ್ಮ ಕಾಮಕಾಂಚನಾಸಕ್ತಿಯ ದೆಸೆಯಿಂದ ಕೇವಲ ದುಃಖದಲ್ಲಿಯೇ ಮುಳುಗಿಹೋಗುವರೊ, ಆಗ ಅವರ ಮನಸ್ಸು ತ್ಯಾಗದ ಕಡೆಗೆ, ವೈರಾಗ್ಯದ ಕಡೆಗೆ ಮತ್ತು ಭಗವಂತನಲ್ಲಿ ಶರಣಾಗತಿಯ ಕಡೆಗೆ ಹರಿಯಲಾರಂಭಿಸುತ್ತದೆ. ಅನೇಕರಿಗೆ ಕಾಮಕಾಂಚನವನ್ನು ಭೋಗಿಸದೆ ಅವನ್ನು ತ್ಯಜಿಸುವುದಕ್ಕೆ ಆಗುವುದಿಲ್ಲ. ಈ ಸಂಸಾರದಲ್ಲಿ ಸುಖ ಪಡಲು ಅಲ್ಲಿ ಏನಿದೆ? ಕಾಮಕಾಂಚನವೆ? ಅದು ಈಗಿದ್ದುದು ಇನ್ನೊಂದು ಕ್ಷಣದಲ್ಲಿ ಇರದು.

ಈ ಸಂಸಾರದಾಗಸ ಯಾವಾಗ ನೋಡಿದರೂ ಮೋಡ ಕಟ್ಟಿಕೊಂಡು ಸತತ ಮಳೆ ಸುರಿಸುತ್ತಲೇ ಇರುತ್ತದೆ; ಸೂರ್ಯನ ಮುಖ ನೋಡುವುದಕ್ಕೆ ಆಗುವುದಿಲ್ಲ. ಅದರಲ್ಲಿ ದುಃಖದ ಭಾಗವೇ ಅಧಿಕ. ಕಾಮಕಾಂಚನದ ಮೋಡ ಸೂರ್ಯನನ್ನು ನೋಡಲು ಬಿಟ್ಟುಕೊಡಲೊಲ್ಲದು. ಕೆಲಕೆಲವರು ನನ್ನನ್ನೇ ಕೇಳುತ್ತಾರೆ, "ಮಹಾಶಯರೆ, ಭಗವಂತ ಏಕೆ ಈ ವಿಧವಾದ ಸಂಸಾರವನ್ನು ಸೃಷ್ಟಿಸಿದ? ನಮಗಾವ ಮಾರ್ಗವೂ ಇಲ್ಲವೇನು?" ಅಂತ. ನಾನು ಅವರಿಗೆ ಹೇಳುತ್ತೇನೆ, "ಮಾರ್ಗವಿಲ್ಲದೆ ಏನು? ಆತನಿಗೆ ಶರಣಾಗತರಾಗಿ ಅನುಕೂಲವಾದ ಹವ ಬೀಸುವಂತೆ, ಶುಭಯೋಗ ಘಟಿಸುವಂತೆ ಆತನಿಗೆ ವ್ಯಾಕುಲಚಿತ್ತದಿಂದ ಪ್ರಾರ್ಥನೆ ಸಲ್ಲಿಸಿ. ವ್ಯಾಕುಲಚಿತ್ತದಿಂದ ಕರೆದರೆ ಆತ ನಿಮ್ಮ ಪ್ರಾರ್ಥನೆಯನ್ನು ಕೇಳಿಯೇ ಕೇಳುತ್ತಾನೆ" ಅಂತ.

ಒಬ್ಬನ ಮಗ ರೋಗಗ್ರಸ್ತನಾಗಿ ಇನ್ನೇನು ಯಮನ ಬಾಯಿಗೆ ತುತ್ತಾಗುವುದರಲ್ಲಿದ್ದ. ತಂದೆ ಅತ್ಯಂತ ವ್ಯಾಕುಲನಾಗಿ ತನ್ನ ಮಗನನ್ನು ಬದುಕಿಸಲು ಇವರ ಅವರ ಸಲಹೆ ಕೇಳುತ್ತಾ ಸುತ್ತಾಡಲು ಆರಂಭಿಸಿದ. ಒಬ್ಬ ಹೇಳಿದ: "ನೋಡು, ನೀನು ನಾನು ಹೇಳುವುದನ್ನೆಲ್ಲಾ ಹವಣಿಸಿಕೊಳ್ಳುವುದಾದರೆ ನಿನ್ನ ಮಗನಿಗೆ ಗುಣವಾಗಿಬಿಡುತ್ತದೆ: ಸ್ವಾತಿ ನಕ್ಷತ್ರದ ಮಳೆ ಹೊಯ್ದು ಅದು ಒಂದು ಕಪಾಲದಲ್ಲಿ ಶೇಖರವಾಗಿರಬೇಕು; ಆ ನೀರನ್ನು ಕುಡಿಯಲು ಒಂದು ಕಪ್ಪೆ ಅಲ್ಲಿಗೆ ಬರಬೇಕು; ಒಂದು ಹಾವು ಅದನ್ನು ಅಟ್ಟಿಸಿಕೊಂಡು ಬರಬೇಕು; ಹಾವು ಆ ಕಪ್ಪೆಯನ್ನು ಇನ್ನೇನು ಕಚ್ಚಿಬಿಟ್ಟಿತು ಅನ್ನುವಷ್ಟರಲ್ಲಿ ಕಪ್ಪೆ ಕಪಾಲದ ಮೇಲೆ ನೆಗೆಯಬೇಕು. ಹಾವಿನ ವಿಷ ಕಪಾಲದೊಳಕ್ಕೆ ಬೀಳಬೇಕು; ಆ ವಿಷಮಿಶ್ರಿತ ನೀರನ್ನು ತಂದು ನಿನ್ನ ಮಗನಿಗೆ ಸ್ವಲ್ಪ ಕುಡಿಸಬೇಕು."

ಆ ಮನುಷ್ಯ ಅತ್ಯಂತ ವ್ಯಾಕುಲಚಿತ್ತದಿಂದ ಆ ಔಷಧಕ್ಕಾಗಿ ಸ್ವಾತಿ ನಕ್ಷತ್ರ ಉದಯಿಸಿದೊಡನೆ ಮನೆಬಿಟ್ಟು ಹೊರಟ. ಸ್ವಾತಿ ಮಳೆ ಹೊಯ್ಯಲಾರಂಭಿಸಿತು. ಆತ ತೀವ್ರ ವ್ಯಾಕುಲತೆಯಿಂದ ಭಗವಂತನನ್ನು ಪ್ರಾರ್ಥಿಸಿದ, "ಹೇ, ಭಗವಂತ, ನನಗೊಂದು ಕಪಾಲವನ್ನು ದೊರಕಿಸಿ ಕೊಡು" ಅಂತ. ಹುಡುಕುತ್ತ ಹುಡುಕುತ್ತ ಇದ್ದಹಾಗೆ ಮಳೆ ನೀರಿನಿಂದ ತುಂಬಿದ ಒಂದು ಕಪಾಲ ಆತನಿಗೆ ದೊರಕಿತು. ಮತ್ತೆ ಪ್ರಾರ್ಥನೆ ಮಾಡಿದ, "ಹೇ ಭಗವಂತ ನಿನಗೆ ಜಯವಾಗಲಿ! ಈ ಕೆಲಸಕ್ಕೆ ಹಾವು ಮತ್ತು ಕಪ್ಪೆ ಹವಣಿಸಿ ಕೊಟ್ಟುಬಿಡು" ಅಂತ. ಆತನ ಪ್ರಾರ್ಥನೆ ಎಷ್ಟು ಹೃತ್ಪೂರ್ವಕವಾಗಿತ್ತೆಂದರೆ ಎಲ್ಲವೂ ಒಂದೊದಗಿಬಿಟ್ಟವು. ಕಣ್ಣುಮುಚ್ಚಿ ಕಣ್ಣು ಬಿಡುವುದರೊಳಗಾಗಿಯೇ ಒಂದು ಹಾವು ಕಪ್ಪೆಯೊಂದನ್ನು ಆ ಕಡೆ ಅಟ್ಟಿಸಿಕೊಂಡು ಬರಲಾರಂಭಿಸಿತು. ಕಪ್ಪೆಯನ್ನು ಕಚ್ಚಲು ಹೋಗಿ ಆ ಹಾವಿನ ವಿಷ ಕಪಾಲದೊಳಕ್ಕೆ ಬಿದ್ದೇಹೋಯಿತು! ಭಗವಂತನಿಗೆ ಶರಣಾಗತರಾಗಿ ಆತನನ್ನು ವ್ಯಾಕುಲಚಿತ್ತದಿಂದ ಕರೆದರೆ, ಆತ ನಮ್ಮ ಪ್ರಾರ್ಥನೆಯನ್ನು ಕೇಳಿಯೆ ಕೇಳುತ್ತಾನೆ; ಎಲ್ಲವೂ ಸುಗಮವಾಗುವಂತೆ ಮಾಡಿಕೊಡುತ್ತಾನೆ.

ರೋಗಕ್ಕೆ ತಕ್ಕಂತೆ ಔಷಧ ಹಾಕಬೇಕು. ಶ್ರೀಕೃಷ್ಣ ಗೀತೆಯಲ್ಲಿ ಹೇಳುತ್ತಾನೆ: "ಓ, ಅರ್ಜುನ, ನೀನು ನನ್ನಲ್ಲಿ ಶರಣು ಹೊಂದು. ನಿನ್ನನ್ನು ಎಲ್ಲ ವಿಧದ ಪಾಪಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ." ಆತನಲ್ಲಿ ಶರಣಾಗತಿಯನ್ನು ಪಡೆ. ಆತ ಸದ್ಬುದ್ಧಿಯನ್ನು ಕೊಡುತ್ತಾನೆ. ನಿನ್ನ ಭಾರವನ್ನೆಲ್ಲ ಆತ ಹೊತ್ತುಕೊಳ್ಳುತ್ತಾನೆ. ಆಗ ವಿಷಮ ಶೀತಜ್ವರ ನಿನ್ನನ್ನು ಬಿಟ್ಟು ತೊಲಗುವುದು. ಈ ನಮ್ಮ ಮನಸ್ಸಿನಿಂದ ಆತನನ್ನು ಅರಿತುಕೊಳ್ಳಲು ಸಾಧ್ಯವೇ? ಒಂದು ಸೇರಿನ ಪಾತ್ರೆಗೆ ನಾಲ್ಕು ಸೇರು ಹಾಲು ಹಿಡಿಸುವುದೆ? ಆತನನ್ನು ಅರಿಯುವಂತೆ ಆತ ನಮ್ಮನ್ನು ಪ್ರಚೋದಿಸದ ಹೊರತು ಆತನನ್ನು ಅರಿಯಲಾಗುವುದೇ? ಅದಕ್ಕಾಗಿಯೇ ನಾನು ಹೇಳುವುದು. ಆತನಲ್ಲಿ ಶರಣು ಹೊಂದು, ಆತ ತನ್ನಿಚ್ಛೆಯಂತೆ ಮಾಡಲಿ ಎಂದು. ಆತ ಇಚ್ಛಾಮಯ. ಮನುಷ್ಯನಲ್ಲಿ ಯಾವ ಶಕ್ತಿ ತಾನೆ ಇದೆ?

ಈಗ ಶ್ರೀರಾಮಕೃಷ್ಣರು ಭಗವತಿಗೆ ಪ್ರಾರ್ಥನೆ ಮಾಡುತ್ತಿದ್ದಾರೆ: **"ಹೇ ತಾಯೆ! ಹೇ ಓಂಕಾರ ಸ್ವರೂಪಿಣಿಯೇ! ತಾಯೆ, ನಿನ್ನ ವಿಷಯವಾಗಿ ಜನ ಎಷ್ಟೊಂದು ಹೇಳುತ್ತಾರೆ, ಏನು ಕತೆ? ಆದರೆ ನನಗೇನೂ ಅರ್ಥವಾಗುತ್ತಿಲ್ಲ. ನನಗೇನೂ ಗೊತ್ತಿಲ್ಲ ತಾಯೆ. ನಾನು ನಿನ್ನಲ್ಲಿ ಶರಣಾಗತ. ಕೇವಲ ಇದಿಷ್ಟು, ಎಂದರೆ ನಿನ್ನ ಪಾದಪದ್ಮಗಳಲ್ಲಿ ನನಗೆ ಶುದ್ಧ ಭಕ್ತಿಯುಂಟಾಗುವಂತೆ ಕರುಣಿಸಿಬಿಡು ತಾಯೆ. ತಾಯೆ, ನಿನ್ನ ಭುವನಮೋಹಿನೀ ಮಾಯೆಯಿಂದ ನನ್ನನ್ನು ಭ್ರಾಂತಿಗೊಳಿಸಬೇಡ. ನಾನು ನಿನ್ನಲ್ಲಿ ಶರಣಾಗತ, ಶರಣಾಗತ.**